ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಏಪ್ರಿಲ್ 24, 2015

## ಹಿರಿಯ ಪತ್ರಕರ್ತ ಎಸ್. ಕೆ. ರಾಮೂ ಅವರ ನಿಧನಕ್ಕೆ ಮುಖ್ಯಮಂತ್ರಿ ಕಂಬನಿ

ಬೆಂಗಳೂರು, ಏಪ್ರಿಲ್ 24 :

ದಿ ಹಿಂದೂ ಪತ್ರಿಕೆಯ ಸುದ್ದಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ ಹಿರಿಯ ಪತ್ರಕರ್ತ ಶ್ರೀ ಎಸ್. ಕೆ. ರಾಮೂ ಅವರ ನಿಧನಕ್ಕೆ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಕಂಬನಿ ವ್ಯಕ್ತಪಡಿಸಿದ್ದಾರೆ.

ನೇರ ಮಾತು ಹಾಗೂ ತೀಕ್ಷ್ಣ ಬರವಣಿಗೆಗೆ ಹೆಸರಾಗಿದ್ದ ಶ್ರೀ ರಾಮೂ ಅವರು ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ತೀವ್ರ ಕಾಳಜಿ ತೋರುತ್ತಿದ್ದರು. ರಾಜಕೀಯ ರಂಗ ಹಾಗೂ ಸಿನಿಮಾರಂಗದ ಅವರ ಬರವಣಿಗೆಗಳು ಮೆಲುಕು ಹಾಕಲು ಯೋಗ್ಯವಾಗಿರುತ್ತಿತ್ತು. ಶ್ರೀ ರಾಮೂ ಅವರ ನಿಧನದಿಂದ ಆತ್ಮೀಯ ಮಿತ್ರನೋರ್ವನನ್ನು ಕಳೆದುಕೊಂಡಂತಾಗಿದೆ ಎಂದು ಮುಖ್ಯಮಂತ್ರಿ ಬಣ್ಣಿಸಿದ್ದಾರೆ.

**ಬೇಗ್ ಸಂತಾಪ**

ಸೂರ್ಯನಡಿಯ ಎಲ್ಲಾ ವಿಷಯಗಳ ಬಗ್ಗೆಯೂ ಅಧಿಕಾರವತ್ತಾಗಿ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದ ಶ್ರೀ ಎಸ್. ಕೆ. ರಾಮೂ ಅವರು ಅಪರೂಪದ ಪತ್ರಕರ್ತರಾಗಿದ್ದರು ಎಂದು ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಹಜ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಶ್ರೀ ಆರ್. ರೋಷನ್ ಬೇಗ್ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ